**ಓಎಸ್ ನಂಃ 203/2019 ಪಿ.ಡಬ್ಲ್ಯೂ- 3**

**ದಿನಾಂಕಃ 28.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ</u>

ವಾದಿ ಲಕ್ಷ್ಮಿದೇವಮ್ಮರವರ ತಾಯಿ ಹೆಸರು ಗೊತ್ತಾ ಎಂರದೆ ಗಂಗಮ್ಮ. ಗಂಗಮ್ಮ ಎಲ್ಲಿ ವಾಸವಿರುತ್ತಾರೆ ಎಂದರೆ ತೀರಿಕೊಂಡಿರುತ್ತಾರೆ. ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ 10-12 ವರ್ಷ ಆಯಿತು, ಸದರಿ ಗಂಗಮ್ಮನ ಅಂತ್ಯಕ್ರಿಯೆ ಎಲ್ಲಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಅವರ ತಾಯಿ ಮನೆಗೆ ಹೋಗಿರುತ್ತಾರೆ ಅಲ್ಲಿಯೇ ತೀರಿಕೊಂಡಿರುತ್ತಾರೆ. ಸದರಿ ಗಂಗಮ್ಮ ಹುಟ್ಟಿದ ಮನೆಗೆ ಹೋಗಿ ಎಷ್ಟು ವರ್ಷ ಆಯಿತು ಎಂದರೆ ಸಾಯವುದಕ್ಕಿಂತ 3-4 ಮುಂಚೆ ಹೋಗಿರುತ್ತಾರೆ. ಸದರಿ ಗಂಗಮ್ಮ ಊರನ್ನು ಬಿಟ್ಟು 50 ವರ್ಷ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಕ್ಕ ನಿಮ್ಮ ಆಸ್ತಿ ಇರುತ್ತದೆಯಾ ಎಂದರೆ ಇಲ್ಲ. ದಾವಾ ಆಸ್ತಿಯಲ್ಲಿ 1 ಮತ್ತು 2 ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ ಎಂದರೆ ಹೌದು. ಸಾಕ್ಷಿ ಮುಂದುವರೆದು ಪ್ರತಿವಾದಿ ಮತ್ತು ವಾದಿ ಇಬ್ಬರೂ ಒಟ್ಟಿಗೆ ಮಾಡುತ್ತಾರೆ. ವಾದಿ ಯಾವತ್ತು ಸ್ವಾದಿನದಲ್ಲಿ ಇಲ್ಲ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ಕುಟುಂಬಕ್ಕೆ ದಾವಾ ಆಸ್ತಿ ಒಂದೇ ಇರುತ್ತದೆ ಎಂದರೆ ಹೌದು. 1 ನೇ ಪ್ರತಿವಾದಿ ತಂದೆ ಹೆಸರು ಚೆನ್ನಪ್ಪ ಎಂದರೆ ಹೌದು. ಸದರಿ ಚೆನ್ನಪ್ಪ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ದಾವಾ ಆಸ್ತಿ ಇರುತ್ತದೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಗುರಪ್ಪ ಕೊಂಡುಕೊಂಡಿರುವ ಆಸ್ತಿ ಎಂದರೆ ಚೆನ್ನಪ್ಪನೇ ಸಂಪಾದನೆ ಮಾಡಿದ ಆಸ್ತಿ. ನಿಮಗೂ ಹಾಗೂ 1 ನೇ ಪ್ರತಿವಾದಿ ಕುಟುಬಂಕ್ಕೂ ಆಗುವುದಿಲ್ಲ

ಆದ್ದರಿಂದ ಅವರ ವಿರುದ್ಧ ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ದಾವಾ ಆಸ್ತಿ **11.04.1977** ರಲ್ಲಿ **1** ನೇ ಪ್ರತಿವಾದಿ ದಾವಾ ಆಸ್ತಿಯನ್ನು ಕೂಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಚಿನ್ನಪ್ಪ ಸಂಪಾದನೆ ಮಾಡಿರುತ್ತಾರೆ. ಚಿನ್ನಪ್ಪನ ಹೆಸರಿನಲ್ಲಿ ದಾಖಲಾತಿ ಇರುತ್ತದೆಯಾ ನೀವು ನೋೀಡಿರುತ್ತೀರಾ ಎಂದರೆ ನೋಡಿರುತ್ತೇನೆ. ಚಿನ್ನಪ್ಪನ ಹೆಸರಿನಲ್ಲಿ ಯಾವ ದಾಖಲಾತಿ ಇರುತ್ತದೆ ಎಂದರೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ದಾವಾ ಆಸ್ತಿಯನ್ನು ಮಂಜೂರು ಮಾಡಿಸಿಕೊಂಡಿರುತ್ತಾರೆ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಹಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.